"ಮ್ಮಾ... ನಾನು ರಾತ್ರಿ ರಾಮಕೃಷ್ಣನೋರ ಮಾಳಿಗಿ ಮ್ಯಾಲೆ ಮಕ್ಕಂತೀನಿ. ಮುಂಜಾನೆ ಬರ್ತೀನಿ". ಇದ್ದಕ್ಕಿದ್ದಂತೆ ಏನಾಯ್ತಿವನಿಗೆ ಎಂದುಕೊಂಡ ಅಮ್ಮ ಏನೂ ಅರ್ಥವಾಗದವಳಂತೆ ಹುಬ್ಬುಗಂಟಿಕ್ಕಿ ನೋಡಿದಳು.

ಪ್ರಕ್ಷುಬ್ಧತೆ ಜಾಸ್ತಿಯಿರುವ ಕಡಲೇ ಮೇಲೆ ಪ್ರಶಾಂತವಾಗಿರುವಂತೆ ಅಪ್ಪ ಸ್ಥಿತಪ್ರಜ್ಞ, ಮೂಕಪ್ರೇಕ್ಷಕ.

## 4

ಪುತುಪುತು ಏಳುತ್ತಲಿದ್ದ ಆಲೋಚನೆಯ ಹುಳುಗಳು.

ಇವತ್ತು ಆರು ಮೂರಾಗಲಿ; ಮೂರು ಆರಾಗಲಿ ಭೀಮಪ್ಪನ ಮುಖಭಂಗ ಮಾಡಲೇಬೇಕು. ವಿಜ್ಞಾನವು ಮಾತ್ರ ಸಾಕ್ಷ್ಯಾಧಾರ ಸಹಿತವಾದ ಖಚಿತ ಜ್ಞಾನ; ಅಧ್ಯಾತ್ಮವೇನಿದ್ದರೂ ಮುಖವಾಡ ಹೊತ್ತಿರುವ ಮೂಢನಂಬಿಕೆಯಷ್ಟೇ. ನಾನು ಒಳಿತು ಕೆಡುಕುಗಳ ಬಗ್ಗೆ, ಸುಳ್ಳು ಸತ್ಯಗಳ ಬಗ್ಗೆ ಇದಮಿತ್ಥಂ ಎಂಬ ನಿರ್ಧಾರ ಕೈಗೊಳ್ಳಬಲ್ಲ ವಿವೇಚನಾಪ್ರಜ್ಞೆಯಿರುವ ಆಧುನಿಕ ಕಾಲದ ತರುಣ. ಮೇಲಾಗಿ ಪದವೀಧರ. ಆತನದೇನಿದೆ? ನಾಲ್ಕಾರು ಪುರಾಣಗಳನ್ನು ಬಾಯಿಪಾಠ ಮಾಡಿಕೊಂಡು, ನಮ್ಮಮ್ಮನಂಥ ನಿರಕ್ಷರಕುಕ್ಷಿ ಗ್ರಾಮೀಣ ಮಹಿಳೆಯರನ್ನು ಯಾಮಾರಿಸಿಕೊಂಡು ಈ ಬದುಕಿನ ಪರೀಕ್ಷೆ ಪಾಸಾದವನಂತೆ ಬಿಂಬಿಸಿಕೊಳ್ಳುವವನು. ಆದರೆ, ನಿಜದಲ್ಲಿ ಆತ ಪುರಾತನ ಮೌಲ್ಯಗಳ ಪಳಿಯುಳಿಕೆಯಷ್ಟೇ. ಇದು ಸಾಕ್ಷರಿ ಮತ್ತು ನಿರಕ್ಷರಿಗಳ ನಡುವಿನ ಒಂದು ನಿರ್ಣಾಯಕ ಕದನ.

'ಇಂದು ಸಂಜೆ ಸಾಧಾರಣದಿಂದ ಭಾರೀ ಮಳೆಯಾಗಲಿದೆ' ಎಂದು ಹವಾಮಾನ ತಜ್ಞರು ಮುನ್ಸೂಚನೆ ನೀಡಿದಾಗ ಆದಕ್ಕಿರುವ ವೈಜ್ಞಾನಿಕ ಆಧಾರದ ಅರಿವಿರುತ್ತದೆಯಾಗಿ ಅದನ್ನು ನಂಬದೆ ಇರಲಾಗದು. ಹಾಗೆ ಆತನಿಗೆ ನನ್ನ ರಾತ್ರಿಯ ಊಟದ ಬಗ್ಗೆ ಖಚಿತವಾಗಿ ಭವಿಷ್ಯ ನುಡಿಯಬಲ್ಲಂಥ ಯಾವ ಆಧಾರಗಳೂ ಇಲ್ಲ. ಹಾಗಿದ್ದೂ ತನ್ನ ಭವಿಷ್ಯದ ನುಡಿಯ ಸಾಕಾರದ ಬಗ್ಗೆ ಆತನಿಗಿರುವ ಹುಚ್ಚು ನಂಬಿಕೆ ಆಶ್ಚರ್ಯಕರವಾದುದು. ಅವನ ನಂಬಿಕೆಯನ್ನು ಬುಡಮೇಲು ಮಾಡಿ ನೀರಿಳಿಸದೆ ಬಿಡಬಾರದು.

ಎಷ್ಟೊಂದು ಮೌಢ್ಯದ ಕಸವನ್ನು ನಮ್ಮ ತಲೆಯಲ್ಲಿ ತುಂಬಿದ್ದ ಆತ. ಈಗವೆಲ್ಲ ಒಂದೊಂದಾಗಿ ನೆನಪಾಗತೊಡಗಿದವು...

...ಅಪ್ಪ ಮನೆಗೊಂದು ಮಡಚಬಹುದಾಗಿದ್ದ ಹೊಸ ಕುರ್ಚಿ ತಂದಿದ್ದ. ಅದನ್ನು ಯಾವಾಗಲೂ ಮಡಚಿ ಮೂಲೆಯಲ್ಲೇ ಇಟ್ಟಿರುತ್ತಿದ್ದುದು ಯಾರಾದರೂ ಬಂದಾಗ ಅದನ್ನು ಬಿಡಿಸಿ ಹಾಕುತ್ತಿದ್ದರು. ಅದಕ್ಕಿಂತ ಮುಂಚೆ ಆ ಸೌಲಭ್ಯವಿಲ್ಲದ್ದರಿಂದ ಯಾರಾದರೂ ಬಂದರೆ ಒಂದು ಚಾಪೆ ಅಥವಾ ಜಮಖಾನೆ ಹಾಸುತ್ತಿದ್ದೆವು. ಒಂದು ಸಲ ರವಿಶಂಕರ್ ಸಾಬರು ಮನೆಯವರೆಗೂ ಬಂದಾಗ ದೊಡ್ಡವರಿಗೆ ಕೂರಿಸಲು ಒಂದು ಕುರ್ಚಿಯಿಲ್ಲವಲ್ಲ ಎಂದು ಅಪ್ಪ ಅವಮಾನದಲ್ಲಿ ಕುಸಿದು ಹೋಗಿದ್ದ. ಅದುಕಾರಣವಾಗಿ ಮನೆಗೆ ಬಂದಿದ್ದ ಹೊಸ ಅತಿಥಿಯಾಗಿತ್ತದು.

ಒಮ್ಮೆ ಸೈಕಲ್ ತಾತ ಬಂದಾಗ ಅಮ್ಮ ಕುರ್ಚಿ ಹಾಕಿ ಅಭಿಮಾನ ತೋರಿಸಿದಳು. ನಯವಾಗಿ ನಿರಾಕರಿಸಿದ ಆತ–

"ನೋಡಮ್ಮ ಮಗಳೇ... ಎಲ್ಲರ ಹಡೆದವ್ವ ಆದ ಭೂಮ್ತಾಯಿಯ ತೊಡೆ ಮ್ಯಾಲೆ ಕುಂದ್ರದು, ನಿಂದ್ರದು, ನಡಿಯದು, ಓಡದು, ಆಡದು, ಮಕ್ಕಂಬದು ಮಾಡಿಕೆಂತ ಇರತನಕ ನಮಗ ಮೂಗಿಗಿ ನೆಗಡಿ; ಮುಕಳಿಗಿ ಹೇಲಾಟ ಹತ್ಲಾರ್ದಂಗ ಆಕಿ ಕಾಪಾಡ್ತಾಳ. ಕಾಲಿಗೆ ಚಪ್ಪಲಿ, ಕುಂಡಿಗಿ ಕುರ್ಚಿ, ಬೆನ್ನಿಗೆ ಮಂಚ ಬಂದಂಗೆಲ್ಲ ಭೂಮ್ತಾಯಿ ಸಂಪರ್ಕ ಕಡಿಮ್ಯಾಗ್ತಾ ಹೋಗುತ್ತ. ನಿಧಾನಕ ಇವು ನಮ್ಮೊಳಗ ಅಹಂಕಾರ ತುಂಬಿಕೆಂತ ಹೋಗ್ತಾವ. ಈ ಅಹಂಕಾರನೇ ಅನಾರೋಗ್ಯಕ್ಕ ದಾರಿ" ಅಂದ.